ದಿನಾಂಕಃ 28.07.2025

ಅಸಲುದಾವಃ 97/2020

ಡಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ಈ ಕೇಸಿನ ವಾದಿ ಲೋಹಿತ್ ಗೌಡ ನನ್ನ ತಮ್ಮನ ಮಗ ಎಂದರೆ ಸರಿ. ಎಂ.ಪಿ.ದಿವ್ಯ ಇವರು ನಿಮ್ಮ ತಮ್ಮನ ಹೆಂಡತಿ ಎಂದರೆ ಸಾಕ್ಷಿ ಹೌದು, ಆದರೆ ಸಂಬಂಧದಲ್ಲಿ ನನಗೆ ಚಿಕ್ಕಮ್ಮನಾಗಬೇಕು ಎಂದು ಉತ್ತರಿಸುತ್ತಾರೆ. ಮೇಲಿನ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ಬರೆದು ಹಾಕಿರುವ ಸಂಗತಿಗಳು ನಿಮಗೆ ಗೊತಿತಲ್ಲ ಎಂದರೆ ಸಾಕ್ಷಿ ಗೊತ್ತಿದೆ ಎಂದು ಉತ್ತರಿಸುತ್ತಾರೆ. ನಾನು ಕೆ.ಎಂ.ದೊಡ್ಡಿ ಭಾರತಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ಹೆಂಡತಿ ಸಹ ಸರ್ಕಾರಿ ಪ್ರೌಡ ಶಾಲ ಶಿಕ್ಷಕರಾಗಿದ್ದಾರೆ ಎಂದರೆ ಸರಿ. ಭಾರತಿ ಕಾಲೇಜಿನ ವಸತಿ ಗೃಹದಲ್ಲಿ ನಾವು ವಾಸವಾಗಿದ್ದೇವೆ ಎಂದರೆ ಸರಿ. ಎಷ್ಟು ವರ್ಷಗಳಿಂದ ಅಲ್ಲಿ ವಾಸವಾಗಿದ್ದೀರಿ ಎಂದರೆ ಸಾಕ್ಷಿ ಇತ್ತೀಚೆಗೆ ವಾಸವಾಗಿದ್ದೇವೆ, ಮೊದಲು ಮಂಡ್ಯದ ನಮ್ಮ ಸ್ವಂತ ಮನೆಯಲ್ಲಿ ವಾಸವಾಗಿದ್ದೆವು ಎಂದು ಉತ್ತರಿಸುತ್ತಾರೆ.

2. ನಿಮ್ಮ ತಮ್ಮ ಕೆ.ಟಿ.ಪುನಿತ್ ಅವರ ಬದುಕಿರುವವರೆಗೆ ನಿಮ್ಮ ತಂದೆ ತಾಯಿ ಜೊತೆಯಲ್ಲಿಯೇ ವಾಸವಾಗಿದ್ದರು ಎಂದರೆ ಸಾಕ್ಷಿ ಎಲ್ಲರೂ ಒಟ್ಟು ಕುಟುಂಬದಲ್ಲಿಯೇ ವಾಸವಾಗಿದ್ದೆವು ಎಂದು ಉತ್ತರಿಸುತ್ತಾರೆ. ಅದೇ ರೀತಿ ನಿಮ್ಮ ತಮ್ಮನ ಹೆಂಡತಿ ದಿವ್ಯ ಸಹ ನಿಮ್ಮ ತಂದೆ ತಾಯಿಯ ಜೊತೆಯಲ್ಲಿಯೇ ವಾಸವಾಗಿದ್ದರು ಎಂದರೆ ಸಾಕ್ಷಿ ಮದುವೆಯಾದ ಹೊರತರಲ್ಲಿ ವಾಸವಾಗಿದ್ದರು ಅಷ್ಟೆ ಆ ನಂತರ ಇರಲಿಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ತಂದೆ ತಾಯಿಗೆ ಪಡಿತರ ಚೀಟಿ ಇರು¤ದೆ ಎಂದರೆ ಸರಿ. ಆ ಪಡಿತರ ಚೀಟಿಯಲ್ಲಿ ನಿಮ್ಮ ತಮ್ಮ ಹಾಗು ಅವರ ಹೆಂಡತಿ ದಿವ್ಯರವರ ಹೆಸರು ಇದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ, ನಾವು ಸರ್ಕಾರಿ ನೌಕರರಾಗಿರುವ ಕಾರಣ ನಮ್ಮ ಹೆಸರಿಲ್ಲ ಎಂದು ಉತ್ತರಿಸುತ್ತಾರೆ. ಇವತ್ತಿಗೂ ನಿಮ್ಮ ತಂದೆ ತಾಯಿ ದಿವ್ಯರವರ ಪಡಿತರ ಆಹಾರ ಪದಾರ್ಥಗಳನ್ನು ನಿಮ್ಮ ತಂದೆ ತಾಯಿಯೇ ಪಡೆಯುತ್ತಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನೀವು ಮತ್ತು ನಿಮ್ಮ ಹೆಂಡತಿ ಬೇರೆ ವಾಸವಿರುವುದರಿಂದ ಪಡಿತರ ಚೀಟಿಯಲ್ಲಿ ನಿಮ್ಮ ಹೆಸರಿಲ್ಲ ಎಂದರೆ ಸಾಕ್ಷಿ ನಾವು ಸರ್ಕಾರಿ ನೌಕರರಾಗಿದ್ದರಿಂದ ನಾನೇ ಹೆಸರು ತೆಗೆಸಿದ್ದೇನೆ ಎಂದು ಉತ್ತರಿಸುತ್ತಾರೆ.

3. ನಿಮ್ಮ ತಮ್ಮ ಪುನಿತ್.ಕೆ.ಟಿ ರವರು ತೀರಿಕೊಂಡ ನಂತರ ನೀವು ನಿಮ್ಮ ತಮ್ಮನ ಮಗ ಮತ್ತು ತಮ್ಮನ ಹೆಂಡತಿ ದಿವ್ಯರವರನ್ನು ಮನೆಯಿಂದ ಹೊರಹಾಕಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಅವರಿಬ್ಬರನ್ನು ಮನೆಯಿಂದ ಹೊರಹಾಕುವುದು ನಿಮ್ಮ ತಂದೆ ತಾಯಿಗೆ ಇಷ್ಟವಿರಲಿಲ್ಲ ಆದರೂ ನಿಮ್ಮ ಬಲವಂತಕ್ಕೆ ಅವರನ್ನು ಹೊರ ಹಾಕಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಪಿತ್ರಾರ್ಜಿತ ಆಸ್ತಿಗಳನ್ನು ನೀವೆ ಲಪಟಾಯಿಸುವ ದುರುದ್ದೇಶದಿಂದ ನಿಮ್ಮ ತಮ್ಮನ ಮಗ ಮತ್ತು ಹೆಂಡತಿಯನ್ನು ಮನೆಯಿಂದ ಹೊರಹಾಕಿಸಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನನ್ನ ತಮ್ಮ ಪುನಿತ್ ಮತ್ತು ದಿವ್ಯರವರ ಮದುವೆ ಎಲ್ಲಿ ಆಯಿತು ಎಂದರೆ ಸಾಕ್ಷಿ ಕೆಂಗಲ್ ನಲ್ಲಿ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ಅವರ ಮದುವೆಗೆ ಯಾರು ಹೋಗಿದ್ದೀರಿ ಎಂದರೆ ಸಾಕ್ಷಿ ಸಂಬಂಧದಲ್ಲಿ ಅವರು ಚಿಕ್ಕಮ್ಮನಾಗಿದ್ದರಿಂದ ನಮಗ್ಯಾರಿಗೂ ಇಷ್ಟವಿರಲಿಲ್ಲ, ಕೊನೆಗೆ ಪುನಿತ್ ಅವರೇ ಬಲವಂತದಿಂದ ನಾವೆಲ್ಲರೂ ಹೋಗಿ ಕೆಂಗಲ್ ನಲ್ಲಿ ಮದುವೆ ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ. ದಾವ ಆಸ್ತಿಗಳನ್ನು ಲಪಟಾಯಿಸುವ ದುರುದ್ದೇಶದಿಂದ ದಿವ್ಯರವರು ಸಂಬಂಧದಲ್ಲಿ ಚಿಕ್ಕಮ್ಮನಾಗಬೇಕು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಮ್ಮ ಪುನಿತ್.ಕೆ.ಟಿ ರವರು ಬದುಕಿರುವವರೆಗೆ ನಿಮ್ಮ ತಂದೆ ತಾಯಿಯನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ನಾನು ನೋಡಿಕೊಳ್ಳುತ್ತಿದ್ದೆ ಎಂದು ಉತ್ತರಿಸುತ್ತಾರೆ. ಮೇಲಿನ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಿಮ್ಮ ತಮ್ಮ ಪುನಿತ್ ಅವರು ಕೆ.ಎಂ.ದೊಡ್ಡಿಯಲ್ಲಿ ಒಂದುಮೊಬೈಲ್ ಶಾಪ್ ಇಟ್ಟುಕೊಂಡಿದ್ದರು ಎಂದರೆ ಸಾಕ್ಷಿ ಮದುವೆಗೂ ಮೊದಲೇ ನಾನು ಇಟ್ಟುಕೊಟ್ಟಿದ್ದೆನು ಎಂದು ಉತ್ತರಿಸುತ್ತಾರೆ. ಮೇಲಿನ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊಬೈಲ್ ಅಂಗಡಿಯಿಂದ ಅವರಿಗೆ ಸಂಪಾದನೆ ಆಗುತ್ತಿತ್ತು ಎಂದರೆ ಸಾಕ್ಷಿ ಇಲ್ಲ, ಲಾಸ್ ಆಗಿತ್ತು ಎಂದು ಉತ್ತರಿಸುತ್ತಾರೆ. ಲಾಸ್ ಆಗುತ್ತಿರಲಿಲ್ಲ, ಅದರಿಂದ ಬಂದ ಆದಾಯದಲ್ಲಿ ಪುನಿತ್ ಅವರು ತಂದೆ ತಾಯಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಇಲ್ಲ, ಅಂಗಡಿ ತೆರೆದ ಮೂರೇ ತಿಂಗಳಿಗೆ ಕ್ಲೋಸ್ ಆಗಿದೆ ಎಂದು ಉತ್ತರಿಸುತ್ತಾರೆ. ಮೇಲಿನ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊಬೈಲ್ ಅಂಗಡಿಯಿಂದ ಬಂದ ಆದಾಯವನ್ನು ತಮ್ಮ ಸಂಸಾರಕ್ಕಾಗಿ ಕೂಡಿ ಇಟ್ಟಿದ್ದರು ಎಂದರೆ

ಸಾಕ್ಷಿ ಮೂರೇ ತಿಂಗಳಿಗೆ ಕ್ಲೋಸ್ ಆಗಿದೆ ಹೇಗೆ ಕೂಡಿ ಇಡಲು ಸಾಧ್ಯ ಎಂದು ಉತ್ತರಿಸುತ್ತಾರೆ.

5. ಈ ದಾವೆಯನ್ನು ವಾದಿ ನನ್ನ ಮತ್ತು ನನ್ನ ತಂದೆ ತಾಯಿ ವಿರುದ್ಧ ಭಾಗಾಂಶ ಕೋರಿ ಹೂಡಿರುತ್ತಾರೆ. ನಮ್ಮ ತಂದೆಗೆ ನಾವು ಮೂರು ಜನ ಮಕ್ಕಳು, ಅವರೆಂದರೆ ನಾನು, ನನ್ನ ತಮ್ಮ ಪುನಿತ್ ಮತ್ತು ವೆಂಕಟೇಶ್.ಬಿ. ವೆಂಕಟೇಶ್ ಅವರು ಬದುಕಿದ್ದಾರಾ ಎಂದರೆ ಸಾಕ್ಷಿ ಇಲ್ಲ, ತೀರಿಹೋಗಿದ್ದಾರೆ ಎಂದು ಉತ್ತರಿಸುತ್ತಾರೆ. ಅವರಿಗೆ ಹೆಂಡತಿ ಮಕ್ಕಳು ಇಲ್ಲ ಎಂದರೆ ಸಾಕ್ಷಿ ಮದುವೆಯಾಗಿರಲಿಲ್ಲ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತುಗಳು ನಮ್ಮ ತಂದೆಯ ಪಿತ್ರಾರ್ಜಿತವಾದ ಆಸ್ತಿಗಳು ಎಂದರೆ ಸರಿ. ಸದರಿ ಸ್ವತ್ತುಗಳು ನನ್ನ ತಂದೆಯ ಸಹೋದರರ ನಡುವೆ ಆದ ನೊಂದಾಯಿತ ವಿಭಾಗ ಪತ್ರದ ಮೂಲಕ ನನ್ನ ತಂದೆಯ ಭಾಗಕ್ಕೆ ಬಂದಿರುವ ಸ್ವತ್ತುಗಳು ಎಂದರೆ ಸರಿ. ದಾವ ಸ್ವತ್ತುಗಳು ಈಗಲೂ ಸಹ ನಮ್ಮ ತಂದೆ 1 ನೇ ಪ್ರತಿವಾದಿರವರ ಹೆಸರಿನಲ್ಲಿಯೇ ಬರುತ್ತಿರುವುದು ಎಂದರೆ ಸರಿ. ದಾವ ಸ್ವತ್ತುಗಳು ಕೃಷಿ ಭೂಮಿ, ವಾಣಿಜ್ಯ ಕಟ್ಟಡ, ಮನೆ ಮತ್ತು ನಿವೇಶನಗಳಾಗಿವೆ ಎಂದರೆ ಸರಿ. ಈಗಲೂ ಸಹ ಆ ಸ್ವತ್ತುಗಳು ಒಟ್ಟು ಕುಟುಂಬದಲ್ಲಿಯೇ ಇವೆ ಎಂದರೆ ಸರಿ. ಸದರಿ ಸ್ವತ್ತುಗಳು ನನ್ನ, ನನ್ನ ತಮ್ಮ ಹಾಗು ನನ್ನ ತಂದೆಯ ನಡುವೆ ವಿಭಾಗ ಆಗಿಲ್ಲ ಎಂದರೆ ಸರಿ. ಸದರಿ ಸ್ವತ್ತುಗಳಿಂದ ಬರುವ ಆದಾಯವನ್ನು ನೀವು ಮತ್ತು ನಿಮ್ಮ ತಂದೆ ಇಬ್ಬರೇ ಅನುಭವಿಸುತ್ತಿದ್ದೀರಿ ಎಂದರೆ ಸಾಕ್ಷಿ ಅನುಭವಿಸುತ್ತಿಲ್ಲ, ನನ್ನ ತಮ್ಮ ಪುನಿತ್ ಅವರ ಆರೋಗ್ಯದ ಸಮಸ್ಯೆಗೆ ಮತ್ತು ಕುಟುಂಬದ ಅವಶ್ಯಕತೆಗೆ ಮಾಡಿದ್ದ ಸಾಲವನ್ನು ತೀರಿಸಲು ಉಪಯೋಗಿಸುತ್ತೇವೆ ಎಂದು ಉತ್ತರಿಸುತ್ತಾರೆ. ಅವರ ಆಗೋಗ್ಯದ ಸಮಸ್ಯೆಗೆ ನೀವು ಯಾವುದೇ ಸಾಲ ಮಾಡಿಲ್ಲ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸಂಪೂರ್ಣವಾಗಿ ನನ್ನ ತಮ್ಮನ ಆರೋಗ್ಯದ ಸಮಸ್ಯೆಯ ಚಿಕಿತ್ಸೆಯನ್ನು ನಾನೇ ನೋಡಿಕೊಂಡಿದ್ದೆನು ಎಂದು ಉತ್ತರಿಸುತ್ತಾರೆ.ಮೇಲಿನ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.
**ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.